**CW :5**

PW : 6

## ಹೆಚ್ಚುವರಿ ಹಿರಿಯ ವ್ಯವಹಾರಿಕ ನ್ಯಾಯಾಧೀಶರು ಮತ್ತು ಹೆಚ್ಚುವರಿ ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಪುತ್ತೂರು, ದ.ಕ.

# CC No.100/2025

ಸಾಕ್ಷಿದಾರರ ಹೆಸರು : ಪ್ರಶಾಂತ್

ತಂದೆಯ ಹೆಸರು : ವೀರಪ್ಪ ಶೆಟ್ಟಿ

ಪ್ರಾಯ : 36 ವರ್ಷ

ಉದ್ಯೋಗ ಇಂಡಸ್ ಟವರ್ ್ಸ ನಲ್ಲಿ ಕೆಲಸ

ವಾಸಸ್ಥಳ : ನರಿಮೊಗರು ಗ್ರಾಮ

ದಿನಾಂಕಃ**10.03.2026** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

<u>ಮುಖ್ಯವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ</u>

ಸಾಕ್ಷಿಗೆ ನಿಪಿ.2 ಮತ್ತು 3 ದಾಖಲೆಗಳನ್ನು ತೋರಿಸಲಾಗಿ ಅದರಲ್ಲಿನ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ನಿಪಿ.2 ಮತ್ತು 3 ರಲ್ಲಿನ ಸಾಕ್ಷಿಯ ಸಹಿಗಳನ್ನು ನಿಪಿ.2ಸಿ ಮತ್ತು 3ಸಿ ಎಂದು ಗುರುತಿಸಲಾಯಿತು. ನಿಪಿ.2 ಮತ್ತು 3 ಕ್ಕೆ ನಾನು 1 ವರೆ ವರ್ಷಗಳ ಹಿಂದೆ ಪುತ್ತೂರು ಗ್ರಾಮಾಂತರ ಪೋ ಠಾಣೆಯಲ್ಲಿ ಸಹಿ ಮಾಡಿದ್ದೇನೆ.

ನನ್ನ ಸಮಕ್ಷಮ ಪೊಲೀಸರು ಯಾವುದೇ ಮಹಜರು ಮಾಡಿಲ್ಲ. ನಿಪಿ-2 ಮತ್ತು 3 ರಲ್ಲಿ ಬರೆದಿರುವ ಅಂಶಗಳು ಗೊತ್ತಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು ಃ ಅನುಮತಿ ನೀಡಲಾಯಿತು)

**<u>ಪಾಟೀ ಸವಾಲುಃ ಸ.ಸ.ಅ. ರವರಿಂದಃ</u>**

ದಿ. 21.11.24 ರಂದು ಪೊಲೀಸರು ಬಲ್ನಾಡು ಗ್ರಾಮದ ಮಾಪ್ಲೆಕೋಚ್ಚಿ ಎಂಬಲ್ಲಿ ಟವರ್ ನಲ್ಲಿ ಬ್ಯಾಟರಿ ಕಳ್ಳತನ ಮಡಿದ್ದ ವಿಚಾರಕ್ಕೆ ಸಂಬಂಧಿಸಿದಂತೆ ಮಹಜರು ಮಾಡಲು ಬಂದಿದ್ದು ಚಾಸಾ-1 ರವರು ತೋರಿಸಿದ ಸ್ಥಳದಲ್ಲಿ ನನ್ನ ಮತ್ತು ಮಹೇಶ ಎನ್ನುವವರ ಸಮಕ್ಷಮ ಸಂಜೆ 6.40 ರಿಂದ 7.00 ರ ವರೆಗೆ ನಿಪಿ-2 ರಂತೆ ಸ್ಥಳದ ಮಹಜರು ಹಾಗೂ ನಿಪಿ-3 ರಂತೆ ನಕಾಶೆಯನ್ನು ತಯಾರಿಸಿ ಸ್ಥಳದಲ್ಲಿಯೇ ನಮ್ಮ ಸಹಿಗಳನ್ನು ಪಡೆದರು ಎಂದರೆ ಸರಿಯಲ್ಲ.

**CW :5**

PW : 6

ಆರೋಪಿಯನ್ನು ಶಿಕ್ಷೆಯಿಂದ ರಕ್ಷಿಸುವ ಸಲುವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲುಃಆರೋಪಿತರ ಪರ ವಕೀಲರಿಂದಃ

ಇರುವುದಿಲ್ಲ.

ಮರುವಿಚಾರಣೆ ಇಲ್ಲ.

ನನ್ನ ಉಕ್ತಲೇಖನದ ರೀತ್ಯ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸರಿ.ಇದೆ.

1 ನೇ ಹೆಚ್ಚುವರಿ ಹಿರಿಯ ವ್ಯವಹಾರಿಕ ನ್ಯಾಯಾಧೀಶರು,
ಮತ್ತು ಜೆಎಂಎಫ್‌ಸಿ, ಪುತ್ತೂರು, ದ.ಕ.